**2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**

**ಓ ಎಸ್ .ನಂ. 211/2012**

ಸಾಕ್ಷಿಯ ಹೆಸರು :- ಎಂ ಶ್ರೀನಿವಾಸರಾವ್
ತಂದೆ/ಗಂಡನ ಹೆಸರು :- ಲೇಟ್ ಎಂ ನೂಕಾರಾವ್
ವಯಸ್ಸು :- 46 ವರ್ಷ
ಉದ್ಯೋಗ :- ಅಸ್ಸಿಸ್ಟೆಂಟ್ ಜನರಲ್ ಮ್ಯಾನೇಜರ್(ಲಾ )
ವಾಸಸ್ಥಳ :- ಹೈದರಾಬಾದ್

**(ಸಾಕ್ಷಿಗೆ ದಿನಾಂಕ: 09.02.2022 ರಂದು ಪ್ರಮಾಣ ವಚನ ಬೋಧಿಸಲಾಯಿತು)**

**ಡಿ ಡಬ್ಲ್ಯೂ 1**

**ಮುಖ್ಯ ವಿಚಾರಣೆ:- 7 ನೇ ಪ್ರತಿವಾದಿ ಪರ ಶ್ರೀ ಹೆಚ್ ವಿ ಬಿ ವಕೀಲರಿಂದ:-**

1. ನಾನು ಸೆಪ್ಟಂಬರ್ -2014 ರಿಂದ ಇಲ್ಲಿಯವರೆಗೆ, ಐ ಎಫ್ ಸಿ ಐ ನಲ್ಲಿ ಅಸ್ಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಐ ಎಫ್ ಸಿ ಐ ನಲ್ಲಿ ನಾವು ಕೈಗಾರಿಕೆಗಳಿಗೆ ಸಾಲವನ್ನು ಕೊಡುತ್ತೇವೆ. ಈ ಹಿಂದೆ ಬೆಂಗಳೂರಿನಲ್ಲಿ ನಮ್ಮ ಕಚೇರಿ ಇತ್ತು. ಸದರಿ ಕಚೇರಿ ಈಗ ಹೈದರಾಬಾದ್‌ಗೆ ಶಿಫ್ಟ್ ಆಗಿರುತ್ತದೆ.

2. ನನಗೆ ನ್ಯಾಯಾಲಯದಿಂದ ಈ ದಾವೆಯಲ್ಲಿ ಸಮನ್ಸ್ ಬಂದಿರುತ್ತದೆ. ನ್ಯಾಯಾಲಯದಿಂದ ಹೇಳಿದಂತಹ ದಾಖಲೆಗಳನ್ನು ನಾನು ಈ ದಿನ ಹಾಜರುಮಾಡುತ್ತಿದ್ದೇನೆ. ನಾವು 7 ನೇ ಪ್ರತಿವಾದಿ ಚಾಮುಂಡೇಶ್ವರಿ ಶುಗರ್ ಕಂಪೆನಿಗೆ ಸಾಲವನ್ನು ನೀಡಿರುತ್ತೇವೆ. ಭದ್ರತೆಗಾಗಿ ಅವರಿಂದ ಆಸ್ತಿಯ ಪತ್ರಗಳನ್ನು ಅಡಮಾನವಾಗಿ ಇಟ್ಟುಕೊಂಡಿರುತ್ತೇವೆ. ನಾನು ಚಾಮುಂಡೇಶ್ವರಿ ಶುಗರ್ ಇವರಿಂದ ಸಾಲದ ಭದ್ರತೆಗಾಗಿ ಪಡೆದುಕೊಂಡಂತಹ ದಾಖಲೆಗಳನ್ನು ಈ ದಿನ ನ್ಯಾಯಾಲಯಕ್ಕೆ ತಂದಿರುತ್ತೇನೆ. ಸದರಿ ದಾಖಲೆಗಳು ಎಲ್ಲವೂ ಓರಿಜನಲ್ ದಾಖಲೆಗಳಾಗಿರುತ್ತವೆ. ದಾಖಲೆಗಳು ಈ ಕೆಳಗಿನಂತೆ ಇರುತ್ತವೆ.

| | |
|---|---|
| ನಿಡಿ-7 | ದಿ:10.05.1972 ರಂದು ಮದ್ದೂರು ತಹಶೀಲ್ದಾರವರ ಕಚೇರಿಯಿಂದ ನೀಡಿದಂತಹ ಪತ್ರ. |
| ನಿಡಿ-8 | ನವೆಂಬರ್ 4 , 1971 ರ ಗೆಜೆಟ್ ನೋಟಿಫಿಕೇಷನ್ |
| ನಿಡಿ-9 | ನವೆಂಬರ್ 16, 1971 ರ ಗೆಜೆಟ್ ನೋಟಿಫಿಕೇಷನ್ |

| | |
|---|---|
| ನಿಡಿ-10 | ದಿಃ 05-07-1972 ರ ರೆವಿನ್ಯೂ ಇನ್ಸ್ ಪೆಕ್ಟರ್ ರವರ ಮೆಮೊ |
| ನಿಡಿ-11 | ದಿಃ03-01-1973 ರ ಲೀಸ್ ಅಗ್ರಿಮೆಂಟ್ |
| ನಿಡಿ-12 | Industrial area ಗಾಗಿ ಕೆ ಎಂ ದೊಡ್ಡಿ ಹತ್ತಿರ ಅಕ್ವೈರ್ ರಾದ ಜಮೀನುಗಳ ನೀಲಾ ನಕ್ಷೆ |
| ನಿಡಿ-13 | ದಿಃ06-08-1973 ರ ಎಂ ಐ ಎ ಡಿ ಬಿ ಇವರ ಪತ್ರ |
| ನಿಡಿ-13 ಎ | ದಿಃ06-08-1973 ರ ಎಂ ಐ ಎ ಡಿ ಬಿ ಇವರ ಮತ್ತೊಂದು ಪತ್ರ |
| ನಿಡಿ-14 | ದಿಃ05.05.1990 ರ ಅಗ್ರಿಮೆಂಟ್ |
| ನಿಡಿ-15 | ದಿಃ10.08.1988 ರ ಕೆ ಐ ಡಿ ಬಿ ರವರ ಪತ್ರ |
| ನಿಡಿ-16 | ದಿಃ16.02.1994 ರ ಸೇಲ್ ಡೀಡ್ |

ಈ ಎಲ್ಲಾ ದಾಖಲೆಗಳು ಮೂಲ ದಾಖಲೆಗಳಾಗಿದ್ದು, ಅವುಗಳನ್ನು ಸಾಕ್ಷಿಗೆ ಹಿಂದುರುಗಿಸಲಾಗಿದೆ. ಈ ಎಲ್ಲಾ ದಾಖಲೆಗಳ ದೃಢೀಕೃತ ನಕಲುಗಳನ್ನು ತೆಗೆದುಕೊಳ್ಳಲು ಈ ನ್ಯಾಯಾಲಯದ ಶಿರಸ್ತೇದಾರವರಿಗೆ ಆದೇಶಿಸಲಾಗಿದೆ.

**ಪಾಟೀ ಸವಾಲುಃ** ವಾದಿ ಪರ ವಕೀಲರು ಏನು ಇಲ್ಲ ಎಂದು ಹೇಳುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಒ**

**(ಆದಿತ್ಯ ಆರ್ ಕಲಾಲ್)**
**2ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಂ.ಎಫ್.ಸಿ**
**ನ್ಯಾಯಾಧೀಶರು., ಮದ್ದೂರು.**